**ದಿನಾಂಕಃ 07.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಡಿಕ್ರಿದಾರರ ಪರ ವಕೀಲರಿಂದಃ**

6. ನಾನು ಸಲ್ಲಿಸಿದ ಓ.ಎಸ್. ನಂ. 30/2025 ರ ದಾವೆಯಲ್ಲಿ ನಾನು ಉಮಾದೇವಿಯವರೊಂದಿಗೆ ರಾಜಿ ಮಾಡಿಕೊಂಡು ಅವರಿಗೆ 6 ಸೆಂಟ್ಸ್ ಬಿಟ್ಟು ಕೊಟ್ಟಿದ್ದೇನೆ ಎಂದರೆ ಸರಿ. ನನ್ನ ಹಿಸ್ಸೆಯಾಗಿ 28 ಸೆಂಟ್ಸ್ ನಲ್ಲಿ 22 ಸೆಂಟ್ಸ್ ಮಾತ್ರ ಬರಬೇಕಿದೆ ಎಂದರೆ ಸರಿ . ಓ.ಎಸ್. ನಂ. 30/2025 ರಲ್ಲಿನ ಆದೇಶ ಪುಟಗಳು, ವಾದ ಪತ್ರ, ಪ್ರತಿವಾದ ಪತ್ರಗಳು ಮತ್ತು ರಾಜಿ ಅರ್ಜಿಯ ದೃಢೀಕೃತ ಪ್ರತಿಯನ್ನು ತೋರಿಸಿದ್ದು ಸರಿ ಎಂದು ಒಪ್ಪಿದ್ದರಿಂದ ಅವುಗಳನ್ನು ನಿಪಿ **1** ರಿಂದ ನಿಪಿ **5** ಎಂದು ಗುರುತಿಸಿತು. ಸರ್ವೇ ನಂ. 53 ಎ ಯಲ್ಲಿನ 85 ಸೆಂಟ್ಸ್ ಜಮೀನು ನನ್ನ ತಂದೆ ಮತ್ತು ಅವರ ಅಣ್ಣ-ತಮ್ಮಂದಿರ ಅವಿಭಕ್ತ ಕುಟುಂಬದ ಆಸ್ತಿ ಎಂದರೆ ಸರಿ. ಸದರಿ ಸರ್ವೇ ನಂ. 53 ಎ ಜಮೀನನ್ನು ಪಿತ್ರಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ 1 ನೇ ತೀರ್ಪುಋಣಿ ಇನ್ನೂ ಜೀವಂತವಿರುವ ಕಾರಣದಿಂದ ನನಗೆ ಸರ್ವೇ ನಂ. 53 ಎ ಯಲ್ಲಿ ಯಾವುದೇ ಹಕ್ಕು ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ಡಿಕ್ರಿದಾರರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನಾನು, ನನ್ನ ತಂದೆ ಮತ್ತು ತಂದೆಯ ಕುಟುಂಬ ಸದಸ್ಯರು ಶಾಮೀಲಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 1 ರಂತೆ ಹಾಜರು ಮಾಡಿರುವ ಪಾಲುವಿಭಾಗ ಪತ್ರ ಒಟ್ಟು 25 ಪುಟಗಳಿದ್ದು, ನಾನು ಕೇವಲ 10 ಪುಟಗಳನ್ನು ಮಾತ್ರ ಹಾಜರುಪಡಿಸಿ ಗುರುತಿಸಿಕೊಂಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 2 ಒಟ್ಟು 19 ಪುಟಗಳಿದ್ದು, ನಾನು 10 ಪುಟಗಳನ್ನು ಮಾತ್ರ ಹಾಜರು ಮಾಡಿದ್ದೇನೆ ಎಂದರೆ ಸಾಕ್ಷಿಯು ಉತ್ತರಿಸಿಲ್ಲ. ನಿಡಿ 3 ಕೂಡಾ ಒಟ್ಟು 38 ಪುಟಗಳಿದ್ದು, ನಾನು 10 ಪುಟಗಳನ್ನು ಮಾತ್ರ ಹಾಜರು ಮಾಡಿದ್ದೇನೆ ಎಂದರೆ ಸಾಕ್ಷಿಯು ಉತ್ತರಿಸಿಲ್ಲ ತೀರ್ಪುಋಣಿಗಳಾದ ನನ್ನ ತಂದೆ-ತಾಯಿ ಮತ್ತು ಸಹೋದರರೊಂದಿಗೆ ಶಾಮೀಲಾಗಿ ಸುಳ್ಳು ತಕರಾರು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**